ಕಥೆ

# ನೀಲಾಂಜನನ ಬರ್ಥ್ ಡೆಫೆಕ್ಟು

■ ರಾಜಕುಮಾರ ಕುಲಕರ್ಣಿ

ಜನರಲ್ ಮ್ಯಾನೇಜರ್ ರಾಮನಾಥ ಚಿದ್ರಿ ಸಾಹೇಬರು ಲೀವ್ ಸ್ಯಾಂಕ್ಷನ್ ಮಾಡುವುದಕ್ಕೂ ಮತ್ತು ಅವರ ಚೇಂಬರ್‌ನಲ್ಲಿ ಅಂದು ತಾನು ನೋಡಿದ ಆ ಘಟನೆಗೂ ನಡುವೆ ಅದೆಂಥದ್ದೊ ಗಾಢವಾದ ಸಂಬಂಧವಿರಬಹುದೆಂದು ನೀಲಾಂಜನ ಭಾವಿಸಿದ್ದ. ಅದಕ್ಕೆಂದೆ ತನ್ನ ಲೀವ್ ಅಪ್ಲಿಕೇಷನ್ ಹಿಡಿದು ಜನರಲ್ ಮ್ಯಾನೇಜರ್ ಚೇಂಬರ್ ಪ್ರವೇಶಿಸಿದವನು ಅಪ್ಲಿಕೇಷನ್ ಅವರ ಎದುರಿಟ್ಟು, ತನ್ನ ದೇಹವನ್ನು ಸ್ವಲ್ಪ ಓರೆಯಾಗಿ ಅವರೆಡೆ ತಿರುಗಿಸಿ ನಿಂತ. ಬೆಳಗ್ಗೆ ಚೇಂಬರ್ ಹೊಕ್ಕ ಗಳಿಗೆಯಿಂದ ಅಲ್ಮೆರಾದಲ್ಲಿನ ಫೈಲುಗಳನ್ನೆಲ್ಲ ತಮ್ಮೆದುರು ಗುಡ್ಡೆ ಹಾಕಿಕೊಂಡು ಕಂಪನಿಗೆ ಸಂಬಂಧಿಸಿದ್ದ ಅದ್ಯಾವುದೋ ಹಣಕಾಸಿನ ವ್ಯವಹಾರದಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದ ರಾಮನಾಥ ಚಿದ್ರಿ ದಣಿವನ್ನು ಪರಿಹರಿಸಿಕೊಳ್ಳಲೆಂದು ಮುಖ ಮೇಲೆತ್ತಿ ಕುರ್ಚಿಯ ಹಿಂದಿನ ಗೋಡೆಗೆ ತಲೆಯಾನಿಸುತ್ತಿದ್ದವರಿಗೆ, ಕಣ್ಣೆದುರು ಗೋಚರಿಸಿದ ನೀಲಾಂಜನನ ದಷ್ಟಪುಷ್ಟವಾದ ದೇಹ ಒಂದು ಕ್ಷಣ ಅವರನ್ನು ಬೆಚ್ಚಿ ಬೀಳಿಸಿತು.

ತಮ್ಮನ್ನು ತಾವು ಸಹಜ ಸ್ಥಿತಿಗೆ ತಂದುಕೊಂಡವರಿಗೆ ಪಕ್ಕದಲ್ಲಿ ನಿಂತವನು ನೀಲಾಂಜನ ಎಂದು ಅರಿವಾದದ್ದೇ ಕೋಪಮಿಶ್ರಿತ ಧ್ವನಿಯಲ್ಲಿ, 'ಅಲ್ಲಯ್ಯಾ, ನೀಲಾಂಜನ ಪಕ್ಕದಲ್ಲಿ ಹೀಗೆ ಮಾತಾಡದೆ ಮೂಕ ದೆವ್ವದ ಹಾಗೆ ನಿಂತರೆ ಹೇಗಯ್ಯಾ ಗೊತ್ತಾಗಬೇಕು' ಎಂದು ಸಿಟ್ಟು ಮಾಡಿಕೊಂಡು, ಅವನ ಕೈಯಲ್ಲಿದ್ದ ಲೀವ್ ಅಪ್ಲಿಕೇಷನ್ ತೆಗೆದುಕೊಂಡು ರಜೆ ಮಂಜೂರು ಮಾಡಿಯೇಬಿಟ್ಟರು. ಲೀವ್ ಸ್ಯಾಂಕ್ಷನ್ ಮಾಡಿದರೂ ಇನ್ನೂ ಹಾಗೆ ನಿಂತವನನ್ನು 'ಇನ್ನೂ ಏನಯ್ಯಾ ಕೆಲಸ ಇದೆ. ಲೀವ್ ಸ್ಯಾಂಕ್ಷನ್ ಮಾಡಿದ್ದೀನಲ್ಲ' ಎಂದು ಪ್ರಶ್ನಿಸಿದರು. ನೀಲಾಂಜನ ಯಾವ ಮಾತನ್ನೂ ಆಡದೆ ಮ್ಯಾನೇಜರ್ ಹತ್ತಿರ ಇನ್ನಷ್ಟು ಜರುಗಿ ನಿಂತ. ಆ ಕ್ಷಣಕ್ಕೆ ಎಲ್ಲ ಅರ್ಥವಾದವರಂತೆ ರಾಮನಾಥ ತಮ್ಮ ಅಗಲವಾದ ಹಸ್ತವನ್ನು ನೀಲಾಂಜನನ ಭುಜ ಮತ್ತು ತೋಳಿನ ಮೇಲೆ ಆಡಿಸಿ ಹಿಂದಿನ ಯಾವುದೋ ಸುಖದ ನೆನಪಿನಲ್ಲಿ ಕಳೆದುಹೋದರು. ಇನ್ನೂ ಎಷ್ಟು ಹೊತ್ತು ಹಾಗೆ ಕುಳಿತಿರುತ್ತಿದ್ದರೋ ಚೇಂಬರಿನ ಬಾಗಿಲು ತೆರೆದುಕೊಳ್ಳುತ್ತಿರುವುದು ಕಾಣಿಸಿದ್ದೇ ಕೈಯನ್ನು ಹಿಂತೆಗೆದುಕೊಂಡು 'ಹೋಗಯ್ಯಾ, ನಿನಗೆ ಬೇರೆ ಏನೂ ಕೆಲಸ ಇಲ್ಲ' ಎಂದು ನೀಲಾಂಜನನನ್ನು ಸಾಗಹಾಕಿ, 'ಎಸ್ ಕಮಿನ್' ಎಂದು ಗಂಭೀರವದನರಾಗಿ ಕುಳಿತರು.

ನೀಲಾಂಜನ ಹಾಗೆ ವರ್ತಿಸಲು ಕಾರಣವೂ ಇತ್ತು. ನಡೆದದ್ದಿಷ್ಟು: ಅಂದು ಪ್ರತಿದಿನದಂತೆ ಕಂಪನಿಯ ಕೆಲಸಕ್ಕೆ ಸಂಬಂಧಿಸಿದ ಕೆಲವು ಪತ್ರಗಳಿಗೆ ಜನರಲ್ ಮ್ಯಾನೇಜರರ ಸಹಿ ಪಡೆಯಲೆಂದು ಅವರ ಚೇಂಬರಿಗೆ ಬಂದಿದ್ದ ನೀಲಾಂಜನನಿಗೆ ಅಲ್ಲಿ ಯಾವಾಗಲೂ ಕುಳಿತಿರುತ್ತಿದ್ದ ಪ್ಯೂನ್ ರಂಗಪ್ಪ ಕಣ್ಣಿಗೆ ಬೀಳಲಿಲ್ಲ. ಬಂದವರನ್ನು ಬಾಗಿಲ ಬಳಿಯೇ ನಿಲ್ಲಿಸಿ ರಂಗಪ್ಪ ಒಳಗೆ ಹೋಗಿ ಸಾಹೇಬರಿಗೆ ಬಂದಿರುವವರು ಯಾರೆಂದು ಹೇಳಿ ಒಳಗೆ ಬರಲು ಅವರ ಅನುಮತಿ ದೊರೆಯುವವರೆಗೂ ಯಾರೂ ಜನರಲ್ ಮ್ಯಾನೇಜರ್‌ರ ಚೇಂಬರ್ ಪ್ರವೇಶಿಸುವಂತಿಲ್ಲ ಎನ್ನುವ ಅಲಿಖಿತ ಕಾಯ್ದೆ ಮೊದಲಿನಿಂದಲೂ ಆಫೀಸಿನಲ್ಲಿ ಜಾರಿಯಲ್ಲಿತ್ತು. ನೀಲಾಂಜನ ಆ ದಿನ ತುರ್ತಾಗಿ ಇನ್ನರ್ ಕಂಫರ್ಟ್ ಬಟ್ಟೆಯಂಗಡಿಗೆ ಹೋಗಬೇಕಿದ್ದರಿಂದ ಮತ್ತು ಆಫೀಸಿನ ಕಡತಗಳಿಗೆ ಸಾಹೇಬರ ಸಹಿ ಮಾಡಿಸುವುದೂ ಅಷ್ಟೇ ಮುಖ್ಯವಾಗಿರುವುದರಿಂದ, ತಡಮಾಡಿದರೆ ಎರಡೂ ಕೆಲಸಗಳಾಗುವುದಿಲ್ಲ ಎಂದು ನಿರ್ಧರಿಸಿದವನು ರಂಗಪ್ಪನ ದಾರಿ ಕಾಯದೆ ಚೇಂಬರ್ ಒಳಗೆ ನುಗ್ಗಿಯೇ ಬಿಟ್ಟ. ವಾತಾನುಕೂಲ ಸೌಲಭ್ಯದ ಸಾಹೇಬರ ಚೇಂಬರಿನಲ್ಲಿ ಅಂಥ ರಣಗುಟ್ಟುವ ಭಯಂಕರ ಬೇಸಿಗೆಯಲ್ಲೂ ತಂಪಾದ ಗಾಳಿ ತುಂಬಿಕೊಂಡಿತ್ತು. ಕೂಡಲು ಮೆತ್ತನೆಯ ಸುಖಾಸೀನಗಳು, ಕಿಟಕಿಗಳಿಂದ ಒಳಗೆ ತೂರದಂತೆ ಪ್ರಖರ ಬಿಸಿಲನ್ನು ಮರೆಮಾಚಿದ ಆಕರ್ಷಕ ಪರದೆಗಳು, ಹೂದಾನಿಯಲ್ಲಿ ನಳನಳಿಸುತ್ತಿರುವ ಬಣ್ಣಬಣ್ಣದ ಹೂಗಳು, ತಣ್ಣಗೆ ಮೈಸೋಕುತ್ತಿರುವ ತಂಪಾದ ಹವೆ ಅರೆಕ್ಷಣ ನೀಲಾಂಜನನಿಗೆ ತಾನು ನಿಂತಿರುವ ಆ ಜಾಗ ಇಂದ್ರನ ಅಮರಾವತಿಯಂತೆ ಭಾಸವಾಯಿತು. ರಾಮನಾಥ ಚಿದ್ರಿ ಸಾಹೇಬರು ಅರೆನಿಮಿಲಿತರಾಗಿ ಛಾವಣಿಯತ್ತ ಮುಖಮಾಡಿ ಕುಳಿತಿದ್ದರೆ, ಪಕ್ಕದಲ್ಲಿ ನಿಂತಿದ್ದ ಕಂಪ್ಯೂಟರ್ ಆಪರೇಟರ್ ಪದ್ಮಿನಿಯ ಮುಖ ನಾಚಿಕೆಯಿಂದ ಕೆಂಪಾಗಿತ್ತು. ಸಾಹೇಬರ ಕೈ ಚಲನೆಯೊಂದನ್ನು ಬಿಟ್ಟರೆ ಇಡೀ ಚೇಂಬರಿನಲ್ಲಿ ಕಾಲವೇ ಸ್ತಬ್ಧವಾಗಿ ನಿಂತಿದೆಯೇನೋ ಎನ್ನುವಂತೆ ಅಲ್ಲಿರುವ ಸಕಲ ಚರಾಚರ ಜೀವಜಂತುಗಳು ಚಲನೆಯಿಲ್ಲದೆ ತಟಸ್ಥಗೊಂಡಿದ್ದವು. ಚಿದ್ರಿ ಸಾಹೇಬರ ಕೈ



ಪದ್ಮಿನಿಯ ಬೆನ್ನಿನಿಂದ ನಿಧಾನವಾಗಿ ಭುಜ ಮತ್ತು ತೋಳಿನತ್ತ ಸರಿದು ಅಂತಿಮವಾಗಿ ಅವಳ ಮೃದುವಾದ ಹಸ್ತದೊಳಗೆ ಬೆಸೆದುಕೊಂಡು ಸಂಚಾರಿ ಭಾವದಿಂದ ಸ್ಥಾಯಿ ಭಾವಕ್ಕೆ ಪರಿವರ್ತನೆಗೊಂಡಿತು.

ನೀಲಾಂಜನನ ದೊಡ್ಡ ಕಣ್ಣುಗಳು ಮತ್ತಷ್ಟು ಹಿಗ್ಗಿ ಎದುರಿನ ದೃಶ್ಯ ವೈಭವವನ್ನು ಸಿನಿಮಾದ ಕ್ಯಾಮೆರಾದಂತೆ ಸೆರೆಹಿಡಿಯುತ್ತಿದ್ದವು. ಪದ್ಮಿನಿಗೆ ತನ್ನೆದುರು ಬಟ್ಟಲುಗಣ್ಣುಗಳನ್ನು ಮತ್ತಷ್ಟು ಹಿಗ್ಗಿಸಿ ನಿಂತಿದ್ದ ನೀಲಾಂಜನ ಕಾಣಿಸಿದ್ದೇ ಹಳೆಯ ಹಿಂದಿ ಸಿನಿಮಾವೊಂದರ ಕ್ರೂರ ಖಳನಾಯಕನ ಮುಖ ಕಣ್ಣೆದುರು ಸುಳಿದಂತಾಗಿ ಆ ತಂಪು ವಾತಾವರಣದಲ್ಲೂ ಅವಳ ಹಣೆ ಮತ್ತು ಕುತ್ತಿಗೆಯ ಸುತ್ತ ಬೆವರೊಡೆಯಿತು. ಕೈ ಕೆಳಗೆ ಜಾರಿದ್ದೇ ವಾಸ್ತವಕ್ಕೆ ಮರಳಿದ ಚಿದ್ರಿ ಸಾಹೇಬರಿಗೆ, ಅವಸರವಸರವಾಗಿ ಬಾಗಿಲು ದಾಟಿ ಹೊರಹೋಗುತ್ತಿದ್ದ ಪದ್ಮಿನಿಯ ಬ್ಯಾಕು ಮತ್ತು ತನ್ನ ಹ್ಯಾಪು ಮುಖದಲ್ಲಿ ಪೆದ್ದು ನಗೆ ತುಳುಕಿಸುತ್ತ ನಿಂತಿದ್ದ ನೀಲಾಂಜನನ ಫ್ರಂಟು ಏಕಕಾಲಕ್ಕೆ